ಎಂದು ಒತ್ತಾಯ ಮಾಡುತ್ತಿದ್ದರು. ಮನೆಯವರ ಒತ್ತಾಯಕ್ಕೆ ಎಂಜಿನಿಯರಿಂಗ್ ಸೇರಿಕೊಂಡೆ. 'ಎಲ್ಲೋ ಒಂದು ವರ್ಷ ಹೋಗೋದಷ್ಟೆ.. ಈ ಕಾಲೇಜು, ನಂತರ ಜಾಬ್ ಹಿಡಿದು ಕೆಲಸ ಮಾಡೋದೆಲ್ಲ ನನ್ನ ಬದುಕಿನ ಗುರಿ ಅಲ್ಲ. ನಾನು ಹುಟ್ಟಿದ್ದೇ ನಟಿಸುವುದಕ್ಕೆ. ಏನೇ ಕಲಿತರೂ ಏನೇ ಮಾಡಿದರೂ ನಾನು ನಟನೇ ಆಗುವವನು' ಎಂದು ನಿಶ್ಚಯಿಸಿಕೊಂಡಿದ್ದೆ. ಮನೆಯವರ ಮನಸ್ಸಿಗೆ ನೋವು ಮಾಡಬಾರದು ಎಂದೇ ಎಂಜಿನಿಯರಿಂಗ್ ಮುಗಿಸಿದೆ. ಆ ಸಮಯದಲ್ಲಿಯೇ 'ಕಲಾಗಂಗೋತ್ರಿ' ನಾಟಕ ತಂಡದಲ್ಲಿ ಕೆಲವು ನಾಟಕಗಳಲ್ಲಿ ನಟಿಸಿದೆ. ಎಂಜಿನಿಯರಿಂಗ್ ಮುಗಿದಾಗ ಕೆಲಸ ಹುಡುಕಲು ಹೋಗಲಿಲ್ಲ. ಬದಲಿಗೆ ಅವಕಾಶ ಹುಡುಕಿಕೊಂಡು ಬಣ್ಣದ ಲೋಕಕ್ಕೆ ಬಂದೆ' ಕಾಲೇಜು ಕ್ಯಾಂಪಸ್ಸಿನಿಂದ ನೇರ ಸಿನಿಮಾಗೆ ಬಂದ ಕಥೆಯನ್ನು ಹೇಳಿಕೊಳ್ಳುತ್ತಾರೆ ರೋಚಿತ್.

ಆರಂಭದಲ್ಲಿ ಅವರು ಕಲರ್ಸ್ ಸೂಪರ್ ವಾಹಿನಿಯ ಧಾರಾವಾಹಿಯೊಂದರಲ್ಲಿ ನಟಿಸಿದರು. ರಂಗಭೂಮಿ ನಟನೆಯ ಪ್ರತಿಭೆಯನ್ನು ಉದ್ದೀಪಿಸಿದರೆ, ಧಾರಾವಾಹಿ ಕ್ಯಾಮೆರಾ ಎದುರಿನ ಅಭಿನಯದ ಹದವನ್ನು ಕಲಿಸಿತು. ಅಲ್ಲಿಂದ ಅವರು ಇಮ್ರಾನ್ ಸರ್ದಾರಿಯಾ ನಿರ್ದೇಶನದ 'ಉಪ್ಪು ಹುಳಿ ಖಾರ' ಸಿನಿಮಾಗೆ ನಾಯಕನಾಗಿ ಆಯ್ಕೆಯಾದರು. ನಂತರ ಚಿರಂಜೀವಿ ಸರ್ಜಾ ಅಭಿನಯದ 'ಖಾಕಿ' ಸಿನಿಮಾದಲ್ಲಿಯೂ ಮುಖ್ಯಪಾತ್ರದಲ್ಲಿ ನಟಿಸಿದರು.

ಸುಶಿ ಗಣೇಶನ್ ನಿರ್ದೇಶನದ ಹಿಂದಿ ಸಿನಿಮಾವೊಂದರಲ್ಲಿಯೂ ರೋಚಿತ್ ನಟಿಸಿ ಬಂದಿದ್ದಾರೆ. ತಮ್ಮ ವೃತ್ತಿಜೀವನದ ಆರಂಭದಲ್ಲಿಯೇ ಬಾಲಿವುಡ್‌ನಲ್ಲಿ ಕೆಲಸ ಮಾಡಲು ಅವಕಾಶ ಸಿಕ್ಕಿದ್ದು ಅವರ ಉತ್ಸಾಹವನ್ನು ಹೆಚ್ಚಿಸಿದೆ. 'ಹಿಂದಿ ಸಿನಿಮಾ ಆದರೂ ಆ ತಂಡದಲ್ಲಿನ ಬಹುತೇಕರು ದಕ್ಷಿಣ ಭಾರತದವರೇ ಆಗಿದ್ದರು. ಹಾಗಾಗಿ ಹೊಂದಿಕೊಳ್ಳುವುದು ಕಷ್ಟವಾಗಲಿಲ್ಲ. ಬಾಲಿವುಡ್‌ನಲ್ಲಿ ದಕ್ಷಿಣ ಭಾರತದ ತಂತ್ರಜ್ಞರಿಗೆ ತುಂಬ ಗೌರವ ಇದೆ. ಇವರು ಪರಿಶ್ರಮಿಗಳು ಎಂಬ ಭಾವನೆ ಇದೆ. ಬಾಲಿವುಡ್ ದೊಡ್ಡ ಇಂಡಸ್ಟ್ರಿ. ಹಾಗಾಗಿ ಅವರ ಯೋಚನೆಗಳು, ಕ್ರಮ ಎಲ್ಲವೂ ತುಸು ಪಾಶ್ ಆಗಿರುತ್ತವೆ. ಆದರೆ ಕೆಲಸದ ವಿಷಯದಲ್ಲಿ ನಾವೇ ಬಾಲಿವುಡ್‌ನವರಿಗಿಂತ ಫಾಸ್ಟ್' ಎಂದು ಹೆಮ್ಮೆಯಿಂದಲೇ ಹೇಳಿಕೊಳ್ಳುತ್ತಾರೆ.

ತಮಿಳು, ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ನಿರ್ಮಾಣವಾಗುತ್ತಿರುವ 'ಸಬ್‌ಸ್ಕ್ರೈಬ್' ಎಂಬ ಸಿನಿಮಾದಲ್ಲಿ ರೋಚಿತ್ ನಟಿಸುತ್ತಿದ್ದಾರೆ. ಸುಶಿ ಗಣೇಶನ್ ಅವರ ಜೊತೆ ಕೆಲಸ ಮಾಡಿದ ಯುವ ನಿರ್ದೇಶಕರೊಬ್ಬರು ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ.

'ಈ ಸಿನಿಮಾ ಒಪ್ಪಿಕೊಳ್ಳಬೇಕಾದರೆ ನಾನು ಹೇಳಿದ ಮಾತು ಒಂದೇ. ನೀವು ಒಂದಕ್ಕಿಂತ ಹೆಚ್ಚು ಭಾಷೆಯಲ್ಲಿ ಈ ಸಿನಿಮಾ ಮಾಡ್ತಿದೀರಾ ಅಂದ್ರೆ, ನಮ್ಮ ಕನ್ನಡಲ್ಲಿಯೂ ಮಾಡಬೇಕು. ಹಾಗಿದ್ದರೆ ಮಾತ್ರ ನಾನು ಈ ಚಿತ್ರದ ಭಾಗವಾಗುತ್ತೇನೆ ಎಂದು. ಅವರು ಒಪ್ಪಿಕೊಂಡು ಕನ್ನಡದಲ್ಲಿಯೂ ಮಾಡುತ್ತಿದ್ದಾರೆ. ಕನ್ನಡ ಭಾಷೆಯನ್ನು ನಾವು ಹೇಗೆ ಬಿಟ್ಟುಕೊಡಲು ಸಾಧ್ಯ ಹೇಳಿ?' ಎಂದು ನಗುವ ರೋಚಿತ್, 'ಕಥೆಯೇ ಮುಖ್ಯ, ಮಿಕ್ಕಿದ್ದೆಲ್ಲ ಆ ಕಥೆಯನ್ನು ಜೀವಂತವಾಗಿ ಕಾಣಿಸಲು ಸಹಕರಿಸುವ ಸಲಕರಣೆಗಳಷ್ಟೇ. ನಟ, ತಂತ್ರಜ್ಞಾನ ಎಲ್ಲವೂ ಸೆಕೆಂಡರಿ. ಕಥೆ ಮೊದಲು' ಎನ್ನುತ್ತಾರೆ.

'ಭಿಕ್ಷುಕ, ಕೋಟ್ಯಧಿಪತಿ, ಗೇ, ಟ್ರಾನ್ಸ್‌ಜೆಂಡರ್, ಸಾಮಾನ್ಯ, ಹೀಗೆ ಎಲ್ಲವೂ ಪಾತ್ರಗಳೇ. ಇವು ಮೇಲು ಇವು ಕೀಳು ಎಂಬುದು ನಟನಿಗೆ ಇರಬಾರದು. ನಾನಂತೂ ಯಾವುದೇ ಪಾತ್ರ ಕೊಟ್ಟರೂ ನಟಿಸುತ್ತೇನೆ. ಆ ಪಾತ್ರಕ್ಕೆ ಜೀವ ತುಂಬಲು ಯತ್ನಿಸುತ್ತೇನೆ. ನನಗೆ ಸ್ಟಾರ್ ಆಗುವುದಕ್ಕಿಂತ ಒಳ್ಳೆಯ ನಟನಾಗುವುದು ಮುಖ್ಯ' ಎಂದರೂ ಅವರಿಗೆ ಆಕ್ಷನ್ ಪ್ರಧಾನ ಸಿನಿಮಾಗಳ ಮೇಲೆ ತುಸು ಹೆಚ್ಚೇ ಪ್ರೀತಿಯಿರುವುದನ್ನೂ ಒಪ್ಪಿಕೊಳ್ಳುತ್ತಾರೆ.

'ಕನ್ನಡದಲ್ಲಿಯೇ ಏನಾದರೂ ಸಾಧನೆ ಮಾಡಬೇಕು ಎಂಬುದು ನನ್ನ ಆಸೆ. ಆದರೆ...' ಎಂದು ಮತ್ತೆ ಆರಂಭದಲ್ಲಿಯೇ ಹೊರಹಾಕಿದ ನಿಟ್ಟುಸಿರಿನ ಜಾಡಿಗೆ ಮರಳಿದರು ರೋಚಿತ್. ಕನ್ನಡದಲ್ಲಿ ಪ್ರತಿಭಾವಂತರಿಗೆ, ಪರಿಶ್ರಮಿಗಳಿಗೆ ಸಾಕಷ್ಟು ಅವಕಾಶ ಸಿಗುತ್ತಿಲ್ಲ ಎಂಬ ಬೇಸರ ಅವರಿಗಿದೆ. ಹಾಗಾಗಿಯೇ ನಮ್ಮವರು ಅವಕಾಶ ಅರಸಿಕೊಂಡು ಬೇರೆ ಭಾಷೆಗಳಿಗೆ ಹೋಗುತ್ತಿದ್ದಾರೆ ಎಂಬ ನೋವನ್ನೂ ಹಂಚಿಕೊಳ್ಳುತ್ತಾರೆ. 'ಎಂಜಿನಿಯರಿಂಗ್ ಮಾಡಿದ ಮಗ, ದುಡಿಯುವುದನ್ನು ಬಿಟ್ಟು ಸಿನಿಮಾ ಮಾಡುತ್ತೇನೆ ಎಂದು ಒದ್ದಾಡುತ್ತಿದ್ದರೆ ಮನೆಯವರ ಪ್ರತಿಕ್ರಿಯೆ ಹೇಗಿರುತ್ತದೆ ನಿಮಗೇ ಗೊತ್ತಲ್ವಾ? ಒಂದು ಚೂರು ಹಳಿ ತಪ್ಪಿದರೂ ನಾನು ಶಾಶ್ವತವಾಗಿ ಸಿನಿಮಾ ಸಹವಾಸ ಬಿಡಬೇಕಾಗುತ್ತದೆ. ಹಾಗಾಗದಿರಲಿ ಎಂಬ ಕಾರಣಕ್ಕಾಗಿಯೇ ಬೇರೆ ಭಾಷೆಗಳಲ್ಲಿಯೂ ಹೋಗಿ ನಟಿಸಿ ಬರುತ್ತಿದ್ದೇನೆ. ಏನೇ ಆದರೂ ನನ್ನ ಗಮನ, ಪ್ರೀತಿ ಎಲ್ಲ ಇರುವುದು ಈ ನೆಲದ ಮೇಲೆ. ನಾನು ಬಿದ್ದರೂ ಗೆದ್ದರೂ ಇಲ್ಲಿಯೇ' ಎಂದು ತಮಗೆ ತಾವೇ ಖಚಿತಪಡಿಸಿಕೊಳ್ಳುವ ಹಾಗೆ ಉಸುರಿ ಮಾತು ಮುಗಿಸಿದರು ರೋಚಿತ್.

